ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ಯ 1908—09ನೆ ಇಸವಿ ವಿ॥ ಅರ್ಜೀ ನಂಬರು 694.

ಬೆಂಗಳೂರು ರಾಣಾಸಿಂಗನ ಪೇಟೆಲಿದ್ದು ಫವತಿಪಟ್ಟ ಲಕ್ಷ್ಮಿ ನರಸಮ್ಮನ ಆಸ್ತೀ ವಿಷಯದಲ್ಲಿ—

ಅರ್ಜಿದಾರರು ರಾಣಾಸಿಂಗನಪೇಟೆಲಿರುವ ತರಗಿನ ಮಂಡಿ ದೊಡ್ಡ ನರಸಿಹ್ಮಂಣನವರ ಗೋವಿಂದಪ್ಪ ನವರಿ ಲಕ್ಷ್ಮೀನರಸಮ್ಮನಿಗೆ ಖಾಸ ಗಂಡನಾಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಲಕ್ಷ್ಮಿ ನರಸಮ್ಮನ ಜೆಂದಗಿ ಬಗ್ಯಾಗಿ ಬರತಕ್ಕ 5,400 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗೋವಿಂದಪ್ಪನ ಅರ್ಜಿಯನ್ನು ಸ್ಯ 1909ನೆ ಇಸವಿ ಫೆಬ್ರವರಿ 26ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮಿ ನರಸಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1909ನೆ ಇಸವಿ ಫೆಬ್ರವರಿ ತಿಂಗಳು 5ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1908—09ನೆ ಇಸವಿ ವಿ॥ ಅರ್ಜೀ ನಂಬರು 657.

ಚನ್ನಪಟ್ಟಣದ ತಾಲ್ಲೂಕು ಮಳೂರುಪಟ್ಟಣದಲ್ಲಿದ್ದು ಫವತಿಪಟ್ಟ ಎಂ ಲಿಂಗೈಯ್ಯನ ಆಸ್ತೀ ವಿಷಯದಲ್ಲಿ —

ಅರ್ಜೀದಾರರು ಚನ್ನಪಟ್ಟಣದ ತಾಲ್ಲೂಕು ಮಳೂರುಪಟ್ಟಣದಲ್ಲಿರುವ ವಿಷಕಂಠೆ ಗೌಡನ ಮಗಳಾದ ಪುಟವ್ವನಿಗೆ ಖಾಸ ಗಂಡನಾಗಬೇಕೆಂಬ ಹಕ್ಕುದಾರಿಮೇಲೆ ಮಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಎಂ. ಲಿಂಗೈಯ್ಯನ ಜೆಂದಗಿ ಬಗ್ಯಾಗಿ ಬರತಕ್ಕ 523 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಮ್ಮನ ಅರ್ಜಿಯನ್ನು ಸ್ಯ 1909ನೆ ಇಸವಿ ಫೆಬ್ರವರಿ 19ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಂ. ಲಿಂಗೈಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1909ನೆ ಇಸವಿ ಫೆಬ್ರವರಿ ತಿಂಗಳು 5ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಆ. ಜಯರಾಮ್ಮಯ್ಯರ್,
ಸಬ್ ಜಡ್ಜ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

ತಾರೀಖು 6ನೆ ಫೆಬ್ರವರಿ 1909.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗ್ರೌನ್ಸುಂಟಿನಿಂದ ಸಾದರಾದ 29—6—1901ನೆ ಮ ಕಾರ್ಯಂ 17691—L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರಮ್ಮ ದ್ದಿನ್ನೆಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಬಸವನಗುಡಿ ಮತ್ತು ಮಲ್ಲೇಶ್ವರ ಎಕ್ಸ್‌ಟೆರ್ಷ್ಯರ್‌ಗೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನ 1909ನೆ ಇಸವಿ ಫೆಬ್ರವರಿ ತಾರೀಖು 15 ಮತ್ತು 16ರಲ್ಲು ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ

			ಹರಾಜು ತಾರೀಖು.
ಬಸವನಗುಡಿ ಎಕ್ಸ್‌ಟೆರ್ಷ್ಯರ್.			
2ನೆ ಬ್ಲಾಕ್ ಅಂಗಡಿ ಸೈಟು	197	120 × 10	15— 2—09
4ನೆ ಬ್ಲಾಕ್ ಡಿಟೋ	169, 170	120 × 30	
4ನೆ ಬ್ಲಾಕ್ ಮನೆ ಸೈಟು	200ರ ಲಾಗಾಯಿತು 207 ...	110 × 30	
6ನೆ ಬ್ಲಾಕ್ ಕಾಟೇಜ್ ಸೈಟು	1; 2, 3 & 4 ...	202 × 215	
1ನೆ ಬ್ಲಾಕಿನಲ್ಲಿ ಇರುವ 4 ಮೂಲೆ ಖಾಲಿ ಜಮೀರ್ಾ—ಉತ್ತರ 150 ಅಡಿ. ದಕ್ಷಿಣ 120 ಅಡಿ. ಪೂರ್ವ 114 ಅಡಿ. ಪಶ್ಚಿಮ 200 ಅಡಿ.			
ಮಲ್ಲೇಶ್ವರ ಎಕ್ಸ್‌ಟೆರ್ಷ್ಯರ್.			
ಸಂಪಿಗೆ ರೋಡು ...	43, 44, 45 ...	120 × 30	16— 2—09
ಮಹಮ್ಮದೀಯರ ಬ್ಲಾಕ್ ...	128, 129, 131, 163 ...	100 × 30	
ಹಿಂದೂ ಬ್ಲಾಕ್ ...	470, 471, 472, 473, 474, 475, 476	100 × 30	

ನಿಶ್ಚಯಿಸಿ ಇರುತ್ತಾಗಿ ಹರಾಜಿನಲ್ಲಿ ಛಡಿ ಸವಾಲು ಮೂಲಕ ಪಡದುಕೊಳ್ಳಲು ಇಷ್ಟವುಳ್ಳವರು ಅದೇ ತಾರೀಖು ಪ್ರಾತಃಕಾಲ 8 ಘಂಟೆ ಲಾಗಾಯಿತು ಆ ಯಾಯು ಸೈಟುಗಳ ಬಳಿ ಹಾಜರಿದ್ದು ಛಡಿ ಸವಾಲ್ ಮೂಲಕ ಈ ಕೆಳಗೆ ಕಂಡ ಪ್ರಕಾರ ಸೈಟುಗಳಿಗೆ ವಳಪಟ್ಟು ಛಡಿ ಸವಾಲ್‌ನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರ್ತಿಸದೆ ನಿಲ್ಲುವ ಸೈಟುಗಳನ್ನು ಮರು ದಿವಸಗಳಲ್ಲಿ ಅದೇ ಟೈಮಿನಲ್ಲಿ ಹರಾಜು ಮಾಡಿಸಲ್ಪಡುತ್ತೆ.

1. ಹರಾಜು ಖೈದಾದ ಕೂಡ್ಲೆ ಛಡಿ ಸವಾಲ್ ಮೊಬಲಗಿನಲ್ಲಿ ಕೇಕಡಾ 25 ರೂಪಾಯಿನಂತೆ ಆಗುವ ಸೊಮ್ಮಲಗನ್ನ ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡ್ಲೆ ದುಸಂಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಛಡಿಸವಾಲೆದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗಂದರೆ ಛಡಿಸವಾಲ್ ಮೊಬಲಗ್ಗೆ ಛರ್ತಿಯಾಗಿ ಕೊಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡಿಸವಾಲ್‌ದಾರ ಹಾಜರ್‌ಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಛಡಿಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮುಂಜೂರಾದ ಕೂಡ್ಲೆ ಸೈಟನ್ನ ಛಡಿಸವಾಲ್‌ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಶುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟೆರಿ ಇಂಜನಿಯರ್‌ವರಿಂದ ಮುಂಜೂರಾಗುವ ವರಿಗೂ ಯಾವಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನ ಕಟ್ಟಲೇಕೂಡದು. ಕೆಟ್ಟಡಗಳೆಲ್ಲಾ ಹೆಂಚಿನದಾಗಿಯಾಗಲಿ ಅಥವಾ ತಾರಶೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೀನಾ ಪಾಕೀಜಾ ಬಗ್ಗೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೊಹರಿ ತರಹೆ ಮತ್ತು ಜಾಗ ಸಹ ಸ್ಯಾನಿಟೆರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಬಂದು ಮತ, ಪಣ ಅಥವಾ ಜಾತಿಯವರಿಗೆ ಏರ್ಪಡಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪತದ ಮೇಲೆ ಡಿಪ್ಯೂಟಿ ಕಮಿಷರ್‌ರವರು ಮುಂಜೂರ್ಮಾಡಿದ ಹೊರ್ತು ಇತರ ಮತ, ಪಣ ಯಾ ಜಾತಿಯವರು ವಾಸಾ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನ ಸ್ಯಾನಿಟೆರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲಿ ತೆಗದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪು ನಡದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನ ಹಿಡುವಳೀದಾರನು ಮತ್ಯಾವ ವಿಚಾರಣೆಯೂ ಇಲ್ಲದೆ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪು ನಡೆದದ್ದಕ್ಕೋಸ್ಕರ ನಿವೇಶನವನ್ನ ಸರ್ಕಾರಕ್ಕೆ ಶೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹಾರ ದ್ರವ್ಯಕ್ಕು ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕು ದಾರ್ರಾಗುವದಿಲ್ಲ.

ಎಸ್. ಸುಬ್ಬರಾವ್,
ವೈಸ್ ಪ್ರೆಸಿಡೆಂಟ್.